# ಜ್ಯೋತಿಯನು ಎತ್ತಿ ಹಿಡಿವ ದೀಪಸ್ತಂಭವಾಗಿ

ಡಾ. ಸುಕನ್ಯಾ ಕನಾರಳ್ಳಿ

ಮಾತಿಗೆ ನಿಲುಕದ ಅಗಾಧ ಅನುಭವವನ್ನು ಶಬ್ದದ ಮಿತಿಗೆ ಇಳಿಸುವುದೇ ಅಧ್ಯಾತ್ಮ ಜಗತ್ತಿನ ದೊಡ್ಡ ಸವಾಲು. ಇದರ ಅಗತ್ಯವೇನು ಎಂದು ಕೆಲವರು ಮೌನದಲ್ಲಿ ಮುಳುಗಿದರೆ, ಹಲವರು ಕಾವ್ಯದ, ನಿಗೂಢ ಅಭಿವ್ಯಕ್ತಿಯ ಅವಲಂಬನೆಯನ್ನು ಪಡೆದರು. ಸಾಮಾನ್ಯ ಮನಸ್ಸಿಗೆ ಒಗಟಾಗಿರುವ ಈ ರಚನೆಗಳ ಜಾಡುಹಿಡಿದು ಹೊರಟ ಚಿಂತನೆ ಇಲ್ಲಿದೆ. ಲೇಖಕಿ ವಿದೇಶಗಳಲ್ಲಿ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಮೈಸೂರು ನಿವಾಸಿಯಾಗಿರುವ ಅವರ ಹಲವು ಅನುವಾದ ಹಾಗೂ ಇತರ ಬರಹಗಳು ಪ್ರಕಟಗೊಂಡಿವೆ.

## ಅಲ್ಲಮ-ಬಸವ

**ಸಂಸಾರವೆಂಬ ಹೆಣ ಬಿದ್ದಿರೆ**
**ತಿನಬಂದ ನಾಯ ಜಗಳವ ನೋಡಿರೇ!**
**ನಾಯ ಜಗಳವ ನೋಡಿ**
**ಹೆಣನೆದ್ದು ನಗುತಿದೆ**
**ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೇ!**

ಎಂಬ ಅಲ್ಲಮನ ವಚನವನ್ನು ಓದಿದ ಸಣ್ಣ ವಯಸ್ಸಿನಲ್ಲಿ ಬೆಚ್ಚಿಬಿದ್ದಿದ್ದ ನೆನಪಿದೆ. ನಮ್ಮ ಪಠ್ಯಪುಸ್ತಕಗಳಲ್ಲಿ ಅಲ್ಲಮ ಯಾಕಿಲ್ಲ ಎಂದೂ ಯೋಚಿಸಿದ್ದಿದೆ. ತಕ್ಕಮಟ್ಟಿಗೆ ಅರ್ಥವಾಗಲು ಕಾಯಲೇಬೇಕಿತ್ತು. ಗೌಡಪಾದರ 'ಮಾಂಡೂಕ್ಯಕಾರಿಕಾ'ವನ್ನು ಓದುವಾಗ ಅಲ್ಲಮ ಮತ್ತೆ ಮತ್ತೆ ನೆನಪಾಗುತ್ತಾನೆ. ಹಾಗೆಯೇ ಶಂಕರ ಮತ್ತು ಬಸವರೂ ಕಣ್ಣೆದುರಿಗೆ ಸುಳಿಯುತ್ತಾರೆ. ಅವರುಗಳ ನಡುವಿನ ಸಾಮ್ಯವೇನು ಎಂದು ಸ್ಪಷ್ಟಗೊಳಿಸಿಕೊಳ್ಳುವ ಪ್ರಯತ್ನವಾದ ಈ ಲೇಖನವನ್ನು ಬರೆಯುವಾಗ ಹೋಲಿಕೆಯನ್ನು ಅತಿಯಾಗಿ ಹಿಂಜುವುದು ಸಲ್ಲ ಎಂಬ ಎಚ್ಚರವಂತೂ ಇದೆ.

ಮಾಂಡೂಕ್ಯ ಉಪನಿಷತ್ತಿನ ಏಳನೆಯ ಮಂತ್ರ ಹೀಗಿದೆ:

**ನಾಂತಃಪ್ರಜ್ಞಂ ನ ಬಹಿಃಪ್ರಜ್ಞಂ ನೋಭಯತಃಪ್ರಜ್ಞಂ**
**ನ ಪ್ರಜ್ಞಾನಘನಂ ನ ಪ್ರಜ್ಞಂ ನಾಪ್ರಜ್ಞಮ್ ।**
**ಅದೃಶ್ಯಮವ್ಯವಹಾರ್ಯಮಗ್ರಾಹ್ಯಮಲಕ್ಷಣಮಚಿಂತ್ಯ-**
**ಮವ್ಯಪದೇಶ್ಯಮೇಕಾತ್ಮಪ್ರತ್ಯಯಸಾರಂ ಪ್ರಪಂಚೋಪಶಮಂ**
**ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ ।**

ಅಂದರೆ 'ಆತ್ಮನು ಅಂತಃಪ್ರಜ್ಞನಲ್ಲ, ಬಹಿಃಪ್ರಜ್ಞನಲ್ಲ, ಉಭಯಪ್ರಜ್ಞನಲ್ಲ, ಪ್ರಜ್ಞಾನಘನನಲ್ಲ, ಪ್ರಜ್ಞನಲ್ಲ, ಅಪ್ರಜ್ಞನಲ್ಲ, ಅದೃಶ್ಯನೂ, ವ್ಯವಹಾರಕ್ಕೆ ನಿಲುಕದವನೂ, ಹಿಡಿಯುವುದಕ್ಕೆ ಆಗ ದವನೂ, ಲಕ್ಷಣರಹಿತನೂ, ಚಿಂತಿಸಲು ಆಗದವನೂ, ಶಬ್ದದಿಂದ ನಿರ್ದೇಶಿಸಲ್ಪಡದವನೂ, ಏಕಾತ್ಮಪ್ರತ್ಯಯಸಾರನೂ, ಪ್ರಪಂಚೋಪಶಮನೂ, ಶಾಂತನೂ, ಶಿವನೂ, ಅದ್ವೈತನೂ ಆದವನು. ಅವನನ್ನು ಅರಿತುಕೊಳ್ಳಬೇಕು.'

ಅದನ್ನು ಓದುವಾಗಲೇ ಅಲ್ಲಮನ 'ಊರದ ಚೇಳಿನ ಏರದ ಬೇನೆಯಲ್ಲಿ ಮೂರು ಲೋಕವೆಲ್ಲಾ ನರಳಿತ್ತು!' ಎಂಬ ಸಾಲು ಕಣ್ಣೆದುರಿಗೆ ಹೊಳೆಯುತ್ತದೆ. ತೊಡೆಯಲಾಗದ ಲಿಪಿಯ ಬರೆಯಲಾಗದು ಎನ್ನುವ ಅಲ್ಲಮ ಮಹಾ ವ್ಯಾಖ್ಯಾನವಿರೋಧಿ.

**ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು**
**ತೃಷೆಯ ಮಜ್ಜನಕ್ಕೆರೆವರು**
**ದೇವರಿಲ್ಲ! ಭಕ್ತರಿಲ್ಲ!**
**ನಾನೂ ಇಲ್ಲ! ನೀನೂ ಇಲ್ಲ!**
**ಗುಹೇಶ್ವರ,**
**ಪೂಜಿಸುವವರೂ ಇಲ್ಲ!**
**ಪೂಜೆಗೊಂಬುವರೂ ಇಲ್ಲ!**

ಹಾಗಾದರೆ ಇರುವುದಾದರೂ ಏನು? ಹೇಳಲಾಗುವುದಿಲ್ಲ! 'ಅನಾದಿಯ ಶರಣ ಹೃತ್ಕಮಲ ಮಧ್ಯದ ತೇಜೋಮಯವನು ಏನೆಂದು ಉಪಮಿಸುವೆ?' ಎಂದು ಕೇಳುತ್ತಾ ಅಲ್ಲಮ ಕಂಗೆಡಿಸುತ್ತಾನೆ. ಪಂಚೇಂದ್ರಿಯಗಳ ಮೂಲಕ ದಕ್ಕುವ ಅನುಭವವೆಲ್ಲವೂ ಅವನ ಪ್ರಕಾರ 'ಎಂಜಲು'.

**ಶಬ್ದವೆಂಬೆನೆ ಶ್ರೋತ್ರದೆಂಜಲು**
**ಸ್ಪರ್ಶವೆಂಬೆನೆ ತ್ವಕ್ಕಿನೆಂಜಲು**
**ರೂಪೆಂಬೆನೆ ನೇತ್ರದೆಂಜಲು**
**ರುಚಿಯೆಂಬೆನೆ ಜಿಹ್ವೆಯೆಂಜಲು**
**ಪರಿಮಳವೆಂಬೆನೆ ಘ್ರಾಣದೆಂಜಲು**

ಕೊನೆಗೆ 'ನಾನೆಂಬೆನೆ ಅರಿವಿನೆಂಜಲು' ಎಂದು ತನ್ನನ್ನೂ 'ಇಲ್ಲ'ವಾಗಿಸಿಕೊಳ್ಳುವ ಅಲ್ಲಮ 'ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗುಹೇಶ್ವರ ಲಿಂಗವು' ಎಂಬ ಅದ್ವೈತವನ್ನು ತಲುಪುತ್ತಾನೆ. ಅಲ್ಲಿಗಾದರೂ ನಿಲ್ಲುತ್ತದೆಯೆ? ಅಲ್ಲಮನದು ಗುಹೇಶ್ವರನನ್ನೂ ಕಿಂಚಿತ್ತಾಗಿಸುವಂತಹ ಅಪೂರ್ವ ಧಾರ್ಷ್ಟ್ಯ!

**ಚರಾಚರವೆಂಬುದೊಂದು ಕಿಂಚಿತ್**
**ಚತುರ್ಯುಗವೆಂಬುದೊಂದು ಕಿಂಚಿತ್**
**ತಾನು ಶುದ್ಧವಾದ ಶರಣಂಗೆ**
**ಗುಹೇಶ್ವರನೆಂಬುದೊಂದು ಕಿಂಚಿತ್.**

ಹಾಗಾಗಿಯೇ ಅಲ್ಲಮ 'ನಾ ದೇವನಲ್ಲದೆ ನೀ ದೇವನೆ?' ಎಂದು ಗುಹೇಶ್ವರನನ್ನೂ ಎದೆ ಸೆಟೆಸಿ ಕೇಳಬಲ್ಲ. ಅಂತಹ ಪ್ರಶ್ನೆ ಆಧ್ಯಾತ್ಮಿಕ ಧಿಮಾಕಿನಂತೆ ಕೇಳಿಸಿದರೂ ಸಹ ಅದು 'ಬ್ರಹ್ಮ'ದ 'ಪೂರ್ಣ'ದ 'ಶೂನ್ಯ'ದ ಅರಿವಿನಿಂದ ಹೊಮ್ಮಿರುವಂಥದ್ದು. 'ಅಹಂ ಬ್ರಹ್ಮಾಸ್ಮಿ' ಎಂದ ಅದ್ವೈತಿಗಳನ್ನು ಉಳಿದವರು 'ಮಹಾಂಕಾರಿಗಳು' ಎಂದು ಕರೆದಿಲ್ಲವೆ?

ಇದ್ದೂ ಇಲ್ಲದ್ದಂತೆ ತೋರುವುದು ಬ್ರಹ್ಮ ಎಂದು ವೇದಗಳು ಹೇಳುತ್ತವೆಂದು ಬಲ್ಲೆವು. ಅಲ್ಲಮ 'ಬಯಲು ಬಯಲನೆ ಬಿತ್ತಿ,

ಬಯಲು ಬಯಲನು ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯ' ಎಂದು ಹೇಳುವುದು ಕೇವಲ ಪದವಿಲಾಸಕ್ಕಲ್ಲ. 'ಬಯಲು' ಮತ್ತು 'ಶೂನ್ಯ' ಕೇಳಿಸುವಷ್ಟು ಸರಳವೂ ಅಲ್ಲ.

**ಅಪರಿಮಿತದ ಕತ್ತಲೆಯೊಳಗೆ**
**ವಿಪರೀತದ ಬೆಳಗನಿಕ್ಕಿದವರು ಯಾರೋ**
**ಕತ್ತಲೆಯೂ ಅದೇ, ಬೆಳಕೂ ಅದೇ**

ಎನ್ನುವ ದ್ವಂದ್ವಾತೀತ ಗ್ರಹಿಕೆಗೆ ಅಪೂರ್ವ ಕಾಣ್ಕೆಯ ಶಕ್ತಿಯಿರಬೇಕು.

ಅಲ್ಲಮನನ್ನು ಅರ್ಥೈಸಲು ಹೊರಟರೆ ರೂಪಕವೂ ಬಳಲುತ್ತದೆ. ವಿರೋಧಾಭಾಸವನ್ನೇ ಜೀವಾಳವಾಗಿ ಉಳ್ಳ 'ಬೆಡಗು' ಬರಿಯ ತಂತ್ರವಲ್ಲ , ಅದೊಂದು ಗಾಢವಾದ ದಾರ್ಶನಿಕ ನಿಲುವು. ಬಸವಣ್ಣನ ವಿನಯ ತಲ್ಲಣ ತಳಮಳಗಳನ್ನು ಅಲ್ಲಮನಲ್ಲಿ ಕಾಣಲಾಗುವುದಿಲ್ಲ. ಬಸವಣ್ಣ ಭಾಷೆಯ ಮೂಲಕ ಅರ್ಥದ ಆಲಯವನ್ನು ಕಟ್ಟಿದರೆ ಅಲ್ಲಮ ಎಲ್ಲ ಆಲಯಗಳನ್ನೂ ಬಯಲಾಗಿಸುವತ್ತ ನಡೆದವನು. ಅವನೊಬ್ಬ ಮಹಾ ನಿಷ್ಠುರಿ. ಆಡುಭಾಷೆಯಲ್ಲಿ ನಾವು ಹೇಳುವ 'ತೆಗೆದಾ ಬಿಗಿದಾ' ರೀತಿಯೇ. ಅವನು ನಡೆದದ್ದೇ ಹಾದಿ, ನುಡಿದದ್ದೇ ವೇದ. ಅಲ್ಲಮನೆಂದರೆ ದಾರ್ಶನಿಕತೆಯ ಪ್ರವಾಹ. ಹಾಗಾಗಿಯೇ ಅವನ ವಚನಗಳಲ್ಲಿ ಏಕರೂಪಿ ಕಥಾನಕ ಹೊಮ್ಮುವುದಿಲ್ಲ. ತನ್ನ ಮುಕ್ತತೆ, ಬಹುಮುಖತೆ ಮತ್ತು ವೈರುಧ್ಯಾತ್ಮಕತೆಗಳಿಂದ ಅಲ್ಲಮ ಎಲ್ಲವನ್ನೂ ಮಿಕ್ಕಿ ಮೀರಿದವನು. ಇಷ್ಟಲಿಂಗದ ಕುರುಹನ್ನೂ ಮೀರುವ ಅಲ್ಲಮ 'ಗುಹೇಶ್ವರ ಲಿಂಗದಲ್ಲಿ ನಿಜವ ನೆಯ್ದಿಹೆನೆಂದಡೆ, ಕುರುಹುವಿಡಿದು ಕುರುಹುಗೆಡಬೇಕು' ಎಂದು ಸಾರುತ್ತಾನೆ. ಆಧ್ಯಾತ್ಮಿಕವಾಗಿ ಆತ ಏಕಾಕಿ. ಅವನಿಗೆ ಸಂಸಾರ ಹೇಗೋ ನಿರ್ವಾಣ ಎನ್ನುವುದೂ ಸಹ ಭಾಷೆಯ ಸೆರೆಯಲ್ಲಿ ಸಿಕ್ಕಿಬಿದ್ದ ಒಂದು ವಿಕಲ್ಪವೇ.

ಅಲ್ಲಮ ಬಸವಣ್ಣನನ್ನೂ ಬಿಡುವುದಿಲ್ಲ. 'ತನಗಿಂತ ಕಿರಿಯರಿಲ್ಲ' ಎಂಬ ವಿನಯದ ಬಸವಣ್ಣನಲ್ಲಿ ಅತಿ ಸೂಕ್ಷ್ಮವಾದ 'ಭಕ್ತಿಮದ' ಇರಬಹುದೇನೋ ಎಂಬ ಗುಮಾನಿ ಅಲ್ಲಮನಿಗೆ. ಅಂತೆಯೆ ಕೇಳುತ್ತಾನೆ:

**ಮೇರು ಗಿರಿಗಳೆಲ್ಲವು ಪ್ರಮಥರೊಡವೆ**
**ರಜತ ಗಿರಿಗಳೆಲ್ಲವು ಪುರಾತನರೊಡವೆ**
**ಚತುರ್ದಶ ಭುವನವೆಲ್ಲವು ಲಿಂಗದೊಡವೆ**
**ಪೃಥ್ವಿಯೆಂಬುದು ಕರ್ತಾರನ ಕಮ್ಮಟ**
**ಅಚ್ಚಿನ ಮೊಳೆ, ಬಾಣಸದ ಮನೆ**
**ತನು-ಮನ-ಧನಂಗಳೆಲ್ಲವು ನಮ್ಮ**
**ಗೊಹೇಶ್ವರ ಲಿಂಗದ ಸೊಮ್ಮು**
**ನೀನೇನ ಕೊಟ್ಟು ಭಕ್ತನಾದೆ ಹೇಳಾ ಬಸವಣ್ಣ?**

ಬಸವಣ್ಣ ಸಮಾಜವನ್ನೇ ಧರ್ಮದ ಹಾದಿಯಲ್ಲಿ ತನ್ನೊಡನೆ ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ಹೊತ್ತವ. ಅಮೂರ್ತವನ್ನು ಎಲ್ಲರಿಗೆ ಅರ್ಥವಾಗುವ ಮೂರ್ತಕ್ಕೆ ಇಳಿಸುವ ಹಂಗಿಗೆ ಸಿಕ್ಕವನು. 'ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ?' ಎಂದು ಬಸವಣ್ಣ ಕಳಕಳಿಸಿದರೆ ಅಲ್ಲಮ ಭಿತ್ತಿಯೂ ಇಲ್ಲ, ಚಿತ್ರವೂ ಇಲ್ಲ ಎಂದು ತೆಗೆದು ಒಗೆದಾನು, ಅಂತಃಪ್ರಜ್ಞೆಯೂ ಇಲ್ಲ, ಬಹಿಃಪ್ರಜ್ಞೆಯೂ ಇಲ್ಲ ಎಂದು ಹೇಳಿದ ಮಾಂಡೂಕ್ಯದಂತೆ. 'ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದೊ ಗುಹೇಶ್ವರಾ?' ಎಂದು ಕೇಳಿದ ಅಲ್ಲಮನಂತೆ. ಬಸವಣ್ಣ 'ಮಾಯೆ'ಯ ಬಗ್ಗೆ ಕಳವಳಿಸಿದರೆ ಅಲ್ಲಮ ನೇರವಾಗಿ 'ನೋಡುವುದ ನೋಡಲರಿಯದೆ ಕೆಟ್ಟಿತ್ತು ಜಗವೆಲ್ಲ' ಎಂದಷ್ಟೇ ಹೇಳಿ ಮುಂದೆ ನಡೆಯುತ್ತಾನೆ.

ವಿಶ್ವರೂಪದ ದರ್ಶನದ ಮೂಲಕ 'ಅಮೂರ್ತ'ವನ್ನು 'ಮೂರ್ತ'ವಾಗಿಸುವಾಗ ಬಸವಣ್ಣ ಕೂಡಲಸಂಗಮನ ಶ್ರೀಚರಣ ಮತ್ತು ಶ್ರೀಮುಕುಟಗಳ ನೆರವನ್ನು ಪಡೆಯುತ್ತಾನೆ. ಅಗಮ್ಯ, ಅಪ್ರಮಾಣ, ಅಗೋಚರನನ್ನು ಇಷ್ಟಲಿಂಗವಾಗಿಸಿಕೊಳ್ಳುತ್ತಾನೆ:

**ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ**
**ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ**
**ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ**
**ಅಗಮ್ಯ ಅಪ್ರಮಾಣ ಅಗೋಚರ**
**ಅಪ್ರತಿಮಲಿಂಗವೇ!**
**ಕೂಡಲಸಂಗಮದೇವಯ್ಯ**
**ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ.**

ಆದರೆ ಅಲ್ಲಮನ ಹಾದಿ ಅದಲ್ಲ. ನಾಮ ರೂಪ ಆಚಾರಗಳಿಗೆ ಆತ ಸಿಕ್ಕಿ ಬೀಳುವುದಿಲ್ಲ.

**ರೂಪನೆ ಕಂಡರು ನಿರೂಪನೆ ಕಾಣರು**
**ತನುವನೆ ಕಂಡರು ಅನುವನೆ ಕಾಣರು!**
**ಆಚಾರವನೆ ಕಂಡರು ವಿಚಾರವನೆ ಕಾಣರು!**
**ಗುಹೇಶ್ವರಾ, ನಿಮ್ಮ ಕುರುಹನೆ ಕಂಡು**
**ಕೂಡಲರಿಯದೆ ಕೆಟ್ಟರು.**

ಅಲ್ಲಮ ಏರಿದ 'ಶೂನ್ಯಸಿಂಹಾಸನ' ಅಥವಾ 'ಉರಿ ಗದ್ದುಗೆ' ಸಾಂಸ್ಥಿಕತೆಯ ಹಂಗಿನ ಒಂದು ಕೂಸು. ಅದನ್ನು ನಿರ್ಮಿಸಿದ ಬಸವಣ್ಣ ಅಮೂರ್ತತೆಗೆ ಒಂದು ಸಾಕಾರತೆಯನ್ನು ಕೊಟ್ಟಿದ್ದು ಸಾಂಸ್ಥಿಕ ಹಂಗಿರದ ಅಲ್ಲಮನನ್ನು ಶೂನ್ಯ ಸಿಂಹಾಸನಕ್ಕೆ ಆಹ್ವಾನಿಸುವ ಮೂಲಕ. ಅಲ್ಲಮನ ಸಮ್ಮತ ವಿರೋಧಾಭಾಸದಂತೆ ಕಂಡರೂ ಸಹ ಸಮಷ್ಟಿ ಸಮಯಾಚಾರದ ಅನಿವಾರ್ಯವನ್ನು ಒಪ್ಪಿಕೊಳ್ಳುವ ವಿನಯದ ಪ್ರತೀಕವಾಗಿಯೂ ಅದು ತೋರುತ್ತದೆ.

ಗೌಡಪಾದರಂತೆಯೆ ಅಲ್ಲಮನಲ್ಲಿಯೂ ಸಹ ಬೌದ್ಧ ಪರಿಭಾಷೆಯ ಬಳಕೆ ಕಂಡು ಬರುತ್ತದೆ. ಅಲ್ಲಮ ಬೆಳೆದದ್ದು ಬೌದ್ಧ ಮಹಾಯಾನದ ಪ್ರಧಾನ ಕೇಂದ್ರವಾಗಿದ್ದ ಬಳ್ಳಿಗಾವೆಯ ಕೋಡಿಮಠದಲ್ಲಿ. ಸುಮಾರು ಕ್ರಿ.ಶ.ಎರಡನೆಯ ಶತಮಾನದಿಂದ ಎಂಟನೆಯ ಶತಮಾನದವರೆಗೂ ಕೋಡಿಮಠ ಬೌದ್ಧ ವಜ್ರಯಾನ ಪಂಥದ ಕೇಂದ್ರವಾಗಿ, ಮುಖ್ಯವಾಗಿ ನಾಗಾರ್ಜುನನ ಪ್ರಥಮ ಕಾರ್ಯಕ್ಷೇತ್ರವಾಗಿ ಪ್ರಸಿದ್ಧಿ ಹೊಂದಿರುವ ಸ್ಥಳ. ಅಲ್ಲಿ ಕಾಣಸಿಗುವ ಹಲವಾರು ಬೌದ್ಧ ಅವಶೇಷಗಳು, ಅವಲೋಕಿತೇಶ್ವರ ಮುಂತಾದ ಶಿಲ್ಪಗಳು ಅದಕ್ಕೆ ಸಾಕ್ಷಿಯಾಗಿವೆ. ಗೌಡಪಾದರ ಬೌದ್ಧ ಪರಿಭಾಷೆಯ ಬಳಕೆಯಲ್ಲಿ ಚಾರಿತ್ರಿಕ ಅನಿವಾರ್ಯತೆ ಇದ್ದರೆ ಅಲ್ಲಮನಲ್ಲಿ ಅದು ಸುಪ್ತದಾಳಕ್ಕೆ ಇಳಿದ ಗಾಢ ಪ್ರಭಾವ.

ಬೌದ್ಧರ ಶೂನ್ಯವಾದಕ್ಕೂ ಶರಣರ ಶೂನ್ಯವಾದಕ್ಕೂ ವ್ಯತ್ಯಾಸವಿದೆಯೆ? ಇದೆ ಎನ್ನುವ ವಿದ್ವಾಂಸರು ತಾತ್ತ್ವಿಕವಾಗಿ ಶರಣರ ಶೂನ್ಯ ಅದ್ವೈತದ 'ಪೂರ್ಣ'ಕ್ಕೆ ಹತ್ತಿರವಾದದ್ದು ಎನ್ನುತ್ತಾರೆ. ಏನೇ ಇರಲಿ, ಮಾಧ್ಯಮಿಕ ಶೂನ್ಯವಾದದಲ್ಲಿ ಮುಖ್ಯನಾದ ನಾಗಾರ್ಜುನ ವಿಧಾಯಾತ್ಮಕ (ಪಾಸಿಟಿವ್) ಅಥವಾ ನಿಷೇಧಾತ್ಮಕ (ನೆಗೆಟಿವ್) ಎರಡೂ ಸತ್ಯವನ್ನು ಕಾಣಲು ನಾವೇ ಹಾಕಿಕೊಂಡ ಎರಡು ಚೌಕಟ್ಟುಗಳು ಅಷ್ಟೇ ಎಂದು ಹೇಳುತ್ತಾನೆ. ಶೂನ್ಯವೋ ಪೂರ್ಣವೋ ಎಂಬ ವಾದ ಭಾಷೆಯ ನಡುವೆ ಸಿಕ್ಕಿ ಬಿದ್ದವರ ಗೋಳು ಅಷ್ಟೆ ಎಂದು ತಳ್ಳಿ ಹಾಕುವ ನಾಗಾರ್ಜುನ ನಿಷೇಧವನ್ನೂ ನಿಷೇಧಿಸಿಬಿಡುತ್ತಾನೆ.

ಅಲ್ಲಮ ಎಲ್ಲೋ ಹೇಳಿದ್ದನ್ನು ಇನ್ನೆಲ್ಲೋ ತೆಗೆದು ಹಾಕುತ್ತಾನೆ. ಏಕರೂಪಿನ ಚೌಕಟ್ಟನ್ನು ಧಿಕ್ಕರಿಸುವ ಆತ ಆ ಕಾರಣಕ್ಕೆಯೆ ಸಾಂಸ್ಥಿಕತೆಗೆ ಒದಗಿ ಬರಲಾರ. ಹಾಗಾಗಿಯೇ ಅವನು ವಚನದ 'ಬೆಡಗಿನ' ನೆಪದಲ್ಲಿ ಅಂಚಿಗೆ ಸರಿಸಲ್ಪಡುತ್ತಾನೆ. ಉದಾಹರಣೆಗೆ ಈ ಕೆಳಗಿನ ವಚನವನ್ನೇ ನೋಡಿ:

**ತಪವೆಂಬುದು ತಗಹು**
**ನೇಮವೆಂಬುದು ಬಂಧನ**
**ಶೀಲವೆಂಬುದು ಸೂತಕ**
**ಭಾಷೆಯೆಂಬುದು ಪ್ರಾಣಘಾತಕ**
**ಇಂತೀ ಚತುರ್ವಿಧದೊಳಗಿಲ್ಲ ಗುಹೇಶ್ವರ**
**ನಿಮ್ಮ ಶರಣರಗ್ರಗಣ್ಯರು!**

ಇಲ್ಲಿ ಭಕ್ತಿವಿರೋಧಿಯಂತೆ ತೋರಿ ಬರುವ ಅಲ್ಲಮ ಇನ್ನೊಂದು ಕಡೆ ತಾನು ಹೇಗೆ 'ಸದ್ಭಕ್ತ'ನಾದೆ ಎಂದು ಹೇಳಿಕೊಳ್ಳುತ್ತಾನೆ:

**ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ**
**ಬ್ರಹ್ಮವ ನುಡಿದು ಭ್ರಮಿತನಾದೆನಯ್ಯ**
**ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯ**
**ಗುಹೇಶ್ವರ! ನಿಮ್ಮ ಶರಣ ಸಂಗನ ಬಸವಣ್ಣನ ಸಾನ್ನಿಧ್ಯದಿಂದ**
**ನಾನು ಸದ್ಭಕ್ತನಾದೆನಯ್ಯ.**

### ಗೌಡಪಾದ-ಶಂಕರ

ಶಂಕರರ ಗುರುವಿನ ಗುರು (ಪರಮಗುರು) ಗೌಡಪಾದಾಚಾರ್ಯರು ಸಾಂಸ್ಥಿಕತೆಯ ಹಂಗಿಗೆ ಸಿಕ್ಕವರಲ್ಲ, ಅಲ್ಲಮನಂತೆ.

ಆತ್ಮನ ಜಾಗೃತ್, ಸ್ವಪ್ನ ಮತ್ತು ಸುಷುಪ್ತಿಯೆಂಬ ಅವಸ್ಥಾತ್ರಯಗಳ ತಾತ್ಪರ್ಯವನ್ನು ಗೌಡಪಾದರು ತಮ್ಮ ಮಾಂಡೂಕ್ಯ ಕಾರಿಕೆಯ ನಾಲ್ಕನೆಯ ಪ್ರಕರಣವಾದ ಅಲಾತಶಾಂತಿಯಲ್ಲಿ ಬೌದ್ಧಿಕ ಪರಿಭಾಷೆಯಲ್ಲಿ ನೀಡುತ್ತಾರೆ. ಅಲ್ಲಿಯ ಜಾಗೃತ್ ಮತ್ತು ಸ್ವಪ್ನಗಳೆರಡೂ ಒಂದೇ ಎಂಬ ನಿಲುವಿಗೆ ಜಾಗೃತ್ತಿನ 'ಸುಸಂಬದ್ಧತೆ', 'ವ್ಯಾವಹಾರಿಕತೆ'ಗಳ ಹಂಗಿಲ್ಲ. ತತ್ತ್ವವೆಂದರೆ ತತ್ತ್ವವೇ. ಅಲ್ಲಿ ಯಾರನ್ನೂ ರಂಜಿಸಬೇಕಾದ್ದಿಲ್ಲ, ಒಪ್ಪಿಸಬೇಕಾದ್ದೂ ಇಲ್ಲ. ಸದ್ಯಕ್ಕೆ ಜಾಗೃತ್ತಿನ ಅನುರೂಪತೆಯನ್ನು ಭಾಗಶಃ ಒಪ್ಪಿಕೊಂಡರೂ ಕೊನೆಗೆ ಅದು ಮಿಥ್ಯವೇ. ಅದ್ವಯವಾದ ಆತ್ಮನು ಎಲ್ಲ ಮಿತಿಗಳಿಗೂ ಅತೀತನು. ಅದಷ್ಟೇ ಸತ್ಯ.

ಗೌಡಪಾದರ 'ಅಜಾತಿವಾದ' ಮತ್ತು 'ಅಸ್ಪರ್ಶಯೋಗ' ಸಾಮಾನ್ಯರಿಗೆ ಸಾಕಷ್ಟು ಗಲಿಬಿಲಿ ಉಂಟು ಮಾಡಬಲ್ಲಂತದ್ದು. ಅಜಾತಿಯೆಂದರೆ ಹುಟ್ಟದೆ ಇರುವುದು. ಯಾವ ಜೀವನೂ ಹುಟ್ಟುವುದಿಲ್ಲ, ಯಾಕೆಂದರೆ ಆ ಹುಟ್ಟಿಗೆ ಕಾರಣವೇ ಇಲ್ಲ. ಬ್ರಹ್ಮವೆಂಬುದು ಜನ್ಮಾದಿ ವಿಕಾರಗಳನ್ನು ಮೀರಿದ್ದು. ಗೌಡಪಾದರು ಕೊನೆಗೆ ಪರಮಾರ್ಥ ದೃಷ್ಟಿಯಿಂದ ಅಜಾತಿಯನ್ನೂ ನಿರಾಕರಿಸುತ್ತಾರೆ. ಶಾಸ್ತ್ರಗಳು ಕಲ್ಪಿತವಾದಂತೆಯೇ ಆತ್ಮನ ಅಜತ್ವವೂ ಕಲ್ಪಿತವೇ (ಅಜಃ ಕಲ್ಪಿತ ಸಂವೃತ್ಯಾ ಪರಮಾರ್ಥೇನ ನಾಪ್ಯಜಃ). 'ಯೋಗ' ಎಂದರೆ 'ಸೇರಿಕೆ' ಅಂತಿರುವಾಗ ಪರಮಾರ್ಥವು ಯಾವುದರೊಂದಿಗೂ ಸ್ಪರ್ಶವಿಲ್ಲದ್ದು ಎಂದು ಹೇಳುತ್ತಾ 'ಅಸ್ಪರ್ಶಯೋಗ' (ಸರ್ವ ಸಂಬಂಧಾಖ್ಯ-ಸ್ಪರ್ಶ-ವರ್ಜಿತತ್ತ್ವಾತ್ ಅಸ್ಪರ್ಶಯೋಗಃ) ಎನ್ನುವುದೇ ವಿರೋಧಾಭಾಸವಲ್ಲವೆ? ಗೌಡಪಾದರ ಪ್ರಕಾರ ದ್ವೈತ ಹುಟ್ಟುವುದು ಮನಸ್ಸಿನ ಮೂಲಕವೇ. ಅಮನ ಸ್ಥಿತಿಗೆ ಮಾತ್ರ ಅದ್ವೈತವನ್ನು ಗ್ರಹಿಸುವ ಶಕ್ತಿಯಿರುತ್ತದೆ. ಅಲ್ಲಮನ 'ನಿಸ್ಸಂಗ'ದಂತೆ.

ಶಂಕರಾಚಾರ್ಯರ ಸುಪ್ರಸಿದ್ಧ 'ನಿರ್ವಾಣ ಷಟ್ಕಂ' ಆತ್ಮವೆನ್ನುವುದು ಅದಲ್ಲ ಇದಲ್ಲ ಎಂದು ಎಲ್ಲವನ್ನೂ ನಿಷೇಧಿಸಿ 'ಚಿದಾನಂದ ರೂಪಃ ಶಿವೋಽಹಮ್' ಎಂದು ಸಾರುತ್ತದೆ. ಆದರೂ ಶಂಕರ ಒಬ್ಬ ಜಗದ್ಗುರು. ಜಗತ್ತನ್ನೇ ತನ್ನ ಜೊತೆ ಕೊಂಡೊಯ್ಯುವ ಸಂಕಲ್ಪವನ್ನು ಮಾಡಿದವರು. ಸಮಷ್ಟಿಯ ಸಾಧನೆಯ ಹಾದಿಯಲ್ಲಿ ಸಾಕಾರತೆ, ಸಮಯಾಚಾರಗಳ ಅನಿವಾರ್ಯತೆಯನ್ನು ಬಲ್ಲವರು; ಹಲವಾರು ದೇವರುಗಳ 'ಗತಿಸ್ತ್ವಂ' ಹಾಡುವ ಶಂಕರರ ರಚನೆಗಳು ಅವರು ಪ್ರತಿಪಾದಿಸುವ ಅದ್ವೈತದ ವಿರೋಧಾಭಾಸವಲ್ಲ. ಮೊದಲ ಹಂತವು ವಿಗ್ರಹಾರಾಧನೆ (ಪ್ರಥಮಾ ಪ್ರತಿಮಾಪೂಜಾ); ಮುಂದಿನದು ಜಪ, ಸ್ತೋತ್ರ, ಧ್ಯಾನಗಳಿಂದ ಕೂಡಿದ ಪೂಜೆ (ಜಪಸ್ತೋತ್ರಾಣಿ ಮಧ್ಯಮಾ); ಅದಕ್ಕಿಂತ ಮೇಲಿನದು ಮಾನಸಿಕ ಪೂಜೆ (ಉತ್ತಮಾ ಮಾನಸೀಪೂಜಾ); ಸೋಽಹಂ ಪೂಜೋತ್ತಮೋತ್ತಮಾ (ಸೋಽಹಂ – ನಾನೇ ಅವನು ಎಂದು ತಿಳಿಯುವುದೇ ಅತ್ಯುತ್ತಮ ಪೂಜೆ). ದೈವಸಾನ್ನಿಧ್ಯದಿಂದ ವೈರಾಗ್ಯ ಹೊಮ್ಮುತ್ತದೆ; ವೈರಾಗ್ಯದ ಮೂಲಕ ಮಾಯೆಯಿಂದ ಮುಕ್ತಿ ದೊರೆಯುತ್ತದೆ; ಮಾಯಾಮುಕ್ತಿಯಿಂದ ಶ್ರದ್ಧೆ ಬೆಳೆಯುತ್ತದೆ; ಶ್ರದ್ಧೆಯಿಂದ ಜೀವನ್ಮುಕ್ತಿ ದೊರಕುತ್ತದೆ. ಹೀಗೆ ಶಂಕರರು ಶ್ರೇಣೀಕರಿಸುವ ಅಧ್ಯಾತ್ಮ ಸಾಧನೆ ಸಾಮಾನ್ಯರಿಗೆ ಅರ್ಥವಾಗುವಂಥದ್ದು. ಅವರ ಭಾಷ್ಯ, ಸೂತ್ರ, ಪೀಠಸ್ಥಾಪನೆ, ವ್ಯಕ್ತಿ ಸ್ವರೂಪದ ದೇವತಾಸ್ತುತಿ ಎಲ್ಲವೂ ಕೈ ಹಿಡಿದು ನಡೆಸಬಲ್ಲ ದೀಪಿಕೆಯೇ. ಬಸವಣ್ಣನ ಕಳಕಳಿಯ ಕನವರಿಕೆಯಂತೆ. ಅಲ್ಲಮ ಎಂದರೆ ನಿಃಶಬ್ದ. ಶಬ್ದದ ಲಜ್ಜೆಗೆ ಸಿಲುಕದೆ ಅದರ ಹಂಗನ್ನೇ ಹರಿದುಕೊಂಡವ. ನಿರ್ವಿಷಯದ ಮತ್ತು ನಿಃಶಬ್ದದ ಆಳ ನಿರಾಳವನ್ನು ಗ್ರಹಿಸುವ ಸಾಮರ್ಥ್ಯವುಳ್ಳವನು. ಅದ್ವೈತ ಸೂಚಿಸುವ ಮಾತು 'ಹಿಂದೆ ಸರಿಯುವ' ಸ್ಥಿತಿಯನ್ನು 'ಶಬ್ದಮುಗ್ಧ' ಎಂದು ಕರೆದವನು.

ಸಾಮಾಜಿಕವಾಗಿ ಸಲ್ಲಬೇಕೆಂದರೆ ಸೀಮಿತತೆಗೆ ಬದ್ಧರಾಗುವುದು ಅನಿವಾರ್ಯವೇ. ಅಲ್ಲಮ ಧರ್ಮದ ಆತ್ಮವಾದರೆ ಬಸವಣ್ಣ ಮತ್ತು ಚೆನ್ನಬಸವಣ್ಣ ಅದರ ಸಾಂಸ್ಥಿಕ ದೇಹ. ಶ್ರೀರಾಮಕೃಷ್ಣ ಮತ್ತು ವಿವೇಕಾನಂದರ ನಡುವಿನಂತೆ. ಗೌಡಪಾದ ಮತ್ತು ಶಂಕರಾಚಾರ್ಯರ ನಡುವಿನಂತೆ. ಜ್ಯೋತಿಯನ್ನು ಎತ್ತಿ ಹಿಡಿಯಲು ಒದಗಿ ಬರುವ ದೀಪಸ್ತಂಭದಂತೆ.